**ಸಿ.ಸಿ. ನಂಬರಃ 128/2025**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 22-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಹೆಚ್.ಎನ್. ವಕೀಲರಿಂದ,**

2. ಆರೋಪಿಗೆ ಮುಖ್ಯ ಶಾಖೆಯಲ್ಲಿ ಸಾಲ ನೀಡಿರುತ್ತೇವೆ. ಆರೋಪಿಗೆ ಸಾಲ ನೀಡಿದ ಸಂದರ್ಭದಲ್ಲಿ ನಾನು ಮುಖ್ಯ ಶಾಖೆಯಲ್ಲಿ ಕಿರಿಯ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆನು. ಆರೋಪಿಗೆ ವ್ಯವಹಾರಿಕ ಸಾಲ ನೀಡಿರುತ್ತೇವೆ. ಆರೋಪಿ ಯಾವ ವ್ಯವಹಾರಕ್ಕಾಗಿ ಸಾಲ ಪಡೆದಿರುತ್ತಾರೆಂದು ಈಗ ನೆನಪಿಲ್ಲ. ಸಾಮಾನ್ಯವಾಗಿ ವ್ಯವಹಾರಿಕ ಸಾಲಕ್ಕೆ ಸಂಬಂಧಿಸಿದಂತೆ, ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಳ್ಳುತ್ತೀರಾ ಎಂದರೆ, ಸಾಕ್ಷಿಯು ದಾಖಲೆ ಪಡೆದಿಲ್ಲ ಎಂದು ಉತ್ತರಿಸಿರುತ್ತಾರೆ. ಆರೋಪಿಗೆ ದೂರಿನಲ್ಲಿ ಹೇಳಿರುವ ಸಾಲವನ್ನು ನೀಡದೇ ಇರುವುದರಿಂದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ಸಾಲದ ಅರ್ಜಿಯನ್ನು ಆರೋಪಿ ಬರೆಸಿಕೊಂಡು ಕೊಟ್ಟಿರುತ್ತಾರೆ. ಆರೋಪಿ ಎಷ್ಟು ವ್ಯಾಸಂಗ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಿಪಿ-7 ಖಾಲಿ ಸಾಲದ ಅರ್ಜಿಯ ಮೇಲೆ ಆರೋಪಿಯ ಸಹಿ ಪಡೆದು, ನಾವೇ ತುಂಬಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಆಂಗ್ಲ ಭಾಷೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ 11 ದಾಖಲಾತಿಗಳನ್ನು ನಾನೇ ದೃಢೀಕರಿಸಿರುತ್ತೇನೆ. ನಿಪಿ-7 ರಿಂದ 12 ದಾಖಲಾತಿಗಳನ್ನು ನಾನೇ ಈ ಕೇಸಿಗಾಗಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಕೇವಲ ಫಿರ್ಯಾದಿ ಸೊಸೈಟಿಯಿಂದ ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

3. ನಿಪಿ-2 ಚೆಕ್ಕನ್ನು ಆರೋಪಿಯೇ ಬರೆಸಿಕೊಂಡು ತಂದುಕೊಟ್ಟಿರುತ್ತಾನೆ. ನಿಪಿ-2 ಚೆಕ್ಕಿನಲ್ಲಿರುವ ಸಹಿ ಮತ್ತು ಇತರ ಬರವಣಿಗೆಗಳಲ್ಲಿನ ಪೆನ್ನಿನ ಶಾಹಿ ಮತ್ತು ಬರವಣಿಗೆಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ವ್ಯತ್ಯಾಸ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಘವೇಂದ್ರ ರಾಮ ನಾಯ್ಕ ಎಂಬುವವರು ಫಿರ್ಯಾದಿ ಸೊಸೈಟಿಯಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸಾಲಕ್ಕೆ ಆರೋಪಿಯು ಜಾಮೀನುದಾರರಾಗಿದ್ದರು ಎಂದರೆ ಗೊತ್ತಿಲ್ಲ. ಆಗ ಆರೋಪಿಯಿಂದ ರಾಘವೇಂದ್ರ ರಾಮ ನಾಯ್ಕ ಎಂಬುವವರ ಸಾಲದ ಭದ್ರತೆಗಾಗಿ ನಿಪಿ-2 ಮತ್ತು ಇನ್ನೊಂದು ಫೆಡರಲ್ ಬ್ಯಾಂಕಿನ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ. ಆ ರೀತಿ ಭದ್ರತೆಗಾಗಿ ನೀಡಿದ ನಿಪಿ-2 ಚೆಕ್ಕನ್ನು ಈ ಪ್ರಕರಣದಲ್ಲಿ ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ಆರೋಪಿ ಪಡೆದ ರೂಪಾಯಿ ಇಪ್ಪತ್ತೈದು ಸಾವಿರ ಸಾಲವನ್ನು ಮರುಪಾವತಿಸಿದ್ದರೂ ಸಹ ಫಿರ್ಯಾದಿ ಸೊಸೈಟಿಗೆ ಹೆಚ್ಚಿನ ಲಾಭ ಮಾಡುವ ಸಲುವಾಗಿ ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

4. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಯಾವ ದಿನಾಂಕದಂದು ಅಧಿಕಾರ ನೀಡಿರುತ್ತಾರೆಂದು ನೆನಪಿಲ್ಲ. ನಿಪಿ-1 ದಾಖಲೆಯನ್ನು ಈ ಕೇಸಿಗಾಗಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಫಿರ್ಯಾದಿ

ಸೊಸೈಟಿಯ ನಿರ್ದೇಶಕರ ಮಂಡಳಿಯವರು ಯಾವುದೇ ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿರುವ ಚೆಕ್ಕಿನ ಮೊತ್ತಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**